ದಿನಾಂಕಃ 08.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎ ಜಿ ಪಿ ವಕೀಲರಿಂದಃ

ನನ್ನ ದತ್ತು ಮಗನ ಹೆಸರು ಸನತ್. ಸನತ್ ಅವರಿಗೆ ಒಂದು ವರ್ಷ ವಯಸ್ಸು ಇದ್ದಾಗ ನಾನು ದತ್ತು ಪಡೆದಿರುತ್ತೇನೆ. ನಾನು ದತ್ತು ಪಡೆದ ಸಮಯದಲ್ಲಿ ದತ್ತಕ ಪತ್ರವನ್ನು ನೋಂದಿಣಿ ಮಾಡಿಸಿದ್ದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ವಾದ ಪತ್ರದಲ್ಲಿ 2011 ರಲ್ಲಿ ದತ್ತು ಪಡೆದು 2022 ರಲ್ಲಿ ನೊಂದಣಿ ಪಡೆಸಿರುವುದಾಗಿ ಬರೆದಿರುತ್ತೇನೆ ಎಂದರೆ ಸರಿಯಲ್ಲ. ನಾನು 2011 ರಲ್ಲಿ ನೊಂದಣಿ ಮಾಡಿಸಿರುವುದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸನತ್ ಈಗ 11 ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ನಾನು ದತ್ತು ಪಡೆದ ಸಮಯದಲ್ಲಿ ಮೂಲ ತಂದೆ ತಾಯಿ ಹೆಸರನ್ನು ತಿದ್ದುಪಡಿ ಮಾಡಲು ಪ್ರತಿವಾದಿಯರನ್ನು ಕೇಳಿದ್ದೆ. ಈ ಕುರಿತು ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ. ನಾನು ದತ್ತು ಪಡೆದ ನಂತರ ಸನತ್ ರವರ ಮೂಲ ತಂದೆ ತಾಯಿಯರ ಹೆಸರನ್ನು ತಿದ್ದುಪಡಿ ಮಾಡುವ ಕುರಿತು ಪ್ರತಿವಾದಿಯರನ್ನು ಸಂಪರ್ಕಿಸದೇ ಇದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸನತ್ ರವರ ಜನನ ಪ್ರಮಾಣ ಪತ್ರದಲ್ಲಿ ಇರುವ ಮೂಲ ತಂದೆ ತಾಯಿಯರ ಹೆಸರನ್ನೇ 4 ನೇ ಪ್ರತಿವಾದಿ ಶಾಲಾ ದಾಖಲಾತಿಗಳಲ್ಲಿ ನಮೂದಿಸಿ ಆ ಹೆಸರುಗಳೇ ಮುಂದುವರೆದಿರುತ್ತವೆ ಎಂದರೆ ಸರಿ. ಪ್ರತಿವಾದಿಯರಿಗೆ ನಾನು ಪ್ರಾರ್ಥಿಸಿದಂತೆ ಮೂಲ ತಂದೆ ತಾಯಿ ಹೆಸರು ತಿದ್ದುಪಡಿ ಮಾಡಲು ಅಧಿಕಾರ ಇಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆ ಸಲ್ಲಿಸಲು ಅವಧಿ ಮುಗಿದಿದ್ದರೂ ನಾನು ಸದರಿ ದಾವೆಯನ್ನು ಸಲ್ಲಿಸಿದ್ದರಿಂದ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ಸೊರಬ.